ಸರ್ಕಾರದಿಂದ ನಿರ್ದಿಷ್ಟವಾದ ಮಾಹಿತಿ ಹೋಗದೆ ಅವರು ಪ್ರಾರಂಭ ಮಾಡುವುದಿಲ್ಲ. ಅಲ್ಲಿ ಸ್ಟಾಫ್ ಪ್ರಾಬ್ಲಮ್ ಇರುತ್ತದೆ, ಕಟ್ಟಡ ಇಲ್ಲದೇ ಇರುವುದರಿಂದ, ಅವರು ತಾತ್ಕಾಲಿಕವಾಗಿ ಕಟ್ಟಡವನ್ನು ಕೊಟ್ಟರೆ ಏಕೆ ಪ್ರಾರಂಭ ಮಾಡಬಾರದು. ಇದರ ಬಗ್ಗೆ ಸರ್ಕಾರ ಕ್ಲಾರಿಫೈ ಮಾಡದಿದ್ದರೆ, ಇದು ಜಿಲ್ಲಾ ಪಂಚಾಯಿತಿ ವತಿಯಿಂದ ಕೆಲಸವಾಗುವುದಿಲ್ಲ. ಆಸ್ಪತ್ರೆಯ ಸಲುವಾಗಿ ವರ್ಷಗಟ್ಟಲೇ ಕಾಯಬೇಕಾಗುತ್ತದೆ, ಇದರ ಬಗ್ಗೆ ತಾವು ನಿರ್ದಿಷ್ಟವಾದ ನಿರ್ದೇಶನವನ್ನು ಕೊಡುವುದು ಬಹಳ ಮುಖ್ಯ.

ಶ್ರೀ ಹೆಚ್.ಸಿ.ಮಹದೇವಪ್ಪ: ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮಂಜೂರಾಗಿ ಸಾರ್ವಜನಿಕರಿಂದ ಒಂದು ಲಕ್ಷ ರೂಪಾಯಿಗಳ ವಂತಿಗೆ ಬಂದು ಸರ್ಕಾರದ ಗೈಡ್‌ಲೈನ್ಸ್ ಪ್ರಕಾರ ಅವರು ಫಾಲೋ ಮಾಡಿದ್ದರೆ ಅದು ತನ್ನಷ್ಟಕ್ಕೆ ತಾನೆ ಕೆಲಸವನ್ನು ಪ್ರಾರಂಭ ಮಾಡಲು ಸ್ಪಷ್ಟ ನಿರ್ದೇಶನ ಕೊಟ್ಟಿರುತ್ತೇವೆ. ಕೆಲಸ ಮಾಡದೇ ಆ ತರಹ ಇದ್ದರೆ ಅಂಥವುಗಳಿಗೆ ನಾನು ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಎ.ಆರ್.ಕೃಷ್ಣಮೂರ್ತಿ: ಒಂದು ಲಕ್ಷ ರೂಪಾಯಿಗಳ ವಂತಿಗೆಯನ್ನು ಕೊಟ್ಟ ನಂತರ ಜಿಲ್ಲಾ ಪಂಚಾಯಿತಿಯಲ್ಲಿ ಎಸ್ಟಿಮೇಟ್ ತಯಾರು ಮಾಡತಕ್ಕಂಥಾದ್ದಾಗಲಿ, ಅಥವಾ ಬುಕ್‌ಲೆಟ್‌ನಲ್ಲಿ ಇನ್‌ಕ್ಲೂಡ್ ಮಾಡತಕ್ಕಂಥದ್ದು ಆಗಲಿ, ಅವರು ಆ ಕೆಲಸವನ್ನು ಮಾಡಿಲ್ಲ. ಆರೋಗ್ಯ ಇಲಾಖೆಯಿಂದ ಆದ್ಯತೆ ಕೊಟ್ಟು 2000ನೇ ಇಸ್ವಿಯಲ್ಲಿ ಸೇರಿಸಿದರೆ, ಆ ಆಸ್ಪತ್ರೆಯನ್ನು ಪ್ರಾರಂಭ ಮಾಡಲಿಕ್ಕೆ ಅವಕಾಶವಾಗುತ್ತದೆ ಎನ್ನುವ ಅಂಶವನ್ನು ನಾನು ಹೇಳುತ್ತೇನೆ.

ಶ್ರೀ ಹೆಚ್.ಸಿ.ಮಹದೇವಪ್ಪ: ಜಿಲ್ಲಾ ಪಂಚಾಯತ್ ಒಂದು ಪ್ರತ್ಯೇಕವಾದ ಸರ್ಕಾರ ಇದ್ದ ಹಾಗೆ. ಆರೋಗ್ಯ ಇಲಾಖೆಯ ನಿರ್ವಹಣೆಯ ಕೆಲಸವಾದ ಪ್ರಾಥಮಿಕ ಆರೋಗ್ಯ ಸಂಸ್ಥೆಯನ್ನು ನೇರವಾಗಿ ಜಿಲ್ಲಾಪಂಚಾಯತ್ ಕಾರ್ಯವ್ಯಾಪ್ತಿಗೆ ಒಳಪಡಿಸಿರುತ್ತೇವೆ. ಆ್ಯಕ್ಷನ್ ಪ್ಲಾನಿನಲ್ಲಿ ಆರೋಗ್ಯ ಇಲಾಖೆಯಿಂದ ಬಿಡುಗಡೆಯಾದ ಹಣವನ್ನು ಜಿಲ್ಲಾ ಪಂಚಾಯಿತಿ ಆದ್ಯತೆ ಮೇರೆಗೆ ಹಣವನ್ನು ಒದಗಿಸತಕ್ಕಂಥದ್ದು ಅದು ಜಿಲ್ಲಾ ಪಂಚಾಯಿತಿಯ ಜವಾಬ್ದಾರಿ. ಮಾನ್ಯ ಸದಸ್ಯರು ಜಿಲ್ಲಾ ಪಂಚಾಯಿತಿಯಲ್ಲಿ ಈ ಕೆಲಸವನ್ನು ಮಾಡಿಸಿಕೊಳ್ಳಬೇಕು, ಅವರಿಗೂ ನಾನು ಸಹಾಯ ಮಾಡುತ್ತೇನೆ.

ಕುಂದಾಪುರ ತಾಲ್ಲೂಕಿನ ಬಿದ್ಕಲ್ ಕಟ್ಟೆ ಪದವಿ ಪೂರ್ವ ಕಾಲೇಜಿಗೆ ಹೆಚ್ಚು ಕೊಠಡಿಗಳ ಅವಶ್ಯಕತೆ.

296 (2032)

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ (ಕುಂದಾಪುರ): ಮಾನ್ಯ ಪ್ರಾಥಮಿಕ ಮತ್ತು

ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕಿನ ಬಿದ್ಕಲ್‌ಕಟ್ಟೆ ಪದವಿ ಪೂರ್ವ ಕಾಲೇಜು ಮತ್ತು ಉಡುಪಿ ತಾಲ್ಲೂಕಿನ ಗೋಳಿಅಂಗಡಿ ಪದವಿ ಪೂರ್ವ ಕಾಲೇಜಿಗೆ ಕೊಠಡಿಗಳ ಅವಶ್ಯಕತೆ ಇರುವುದು ಸರಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ, ಆ ಬಗ್ಗೆ ಈ ತನಕ ಮಂಜೂರು ಮಾಡದಿರಲು ಕಾರಣವೇನು?

ಇ) ಎಂದು ಮಂಜೂರು ಮಾಡಲಾಗುವುದು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):

ಅ) ಇಲ್ಲಾ

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಉಪಾಧ್ಯಕ್ಷರೆ, ನಾನು ಕೇಳಿರತಕ್ಕಂಥ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಕೊಟ್ಟಿಲ್ಲ. ಬಹಳಷ್ಟು ಒಳ್ಳೆಯ ಕೆಲಸಗಳನ್ನು ಮಾಡಿರತಕ್ಕಂಥ ಗೋವಿಂದೇಗೌಡರ ಬಾಯಿಯಲ್ಲಿ ಈ ಒಂದು ತಪ್ಪು ಉತ್ತರವನ್ನು ಕೊಡುತಕ್ಕಂಥ ಪರಿಸ್ಥಿತಿಯನ್ನು ನಿರ್ಮಾಣ ಮಾಡಿರುತ್ತಾರೆ. ನಾನು ಈ ಸದನದಲ್ಲಿ ಪದೇ ಪದೇ ಈ ಪ್ರಶ್ನೆಯನ್ನು ಹಾಕಿದ್ದೇನೆ, ಅವರು ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಆದರೆ ಇವತ್ತು ಕೇಳಿರತಕ್ಕಂಥ ಪ್ರಶ್ನೆಗೆ ಈ ಉತ್ತರ ತಮ್ಮ ಗಮನಕ್ಕೆ ಬಂದಿಲ್ಲವೆನ್ನುವಂತೆ ಉತ್ತರವನ್ನು ಕೊಟ್ಟಿದ್ದಾರೆ. ಅದನ್ನು ಸರಿಪಡಿಸಿ ಅದನ್ನು ಯಾವಾಗ ಮಾಡಿಕೊಡುತ್ತಾರೆ ಎನ್ನತಕ್ಕಂಥ ಉತ್ತರವನ್ನು ನಾನು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಉತ್ತರವನ್ನು ಒದಗಿಸಿರುವುದರಲ್ಲಿ, ಇಲ್ಲವೆಂದು ಹೇಳಿರುವ ಆ ಉತ್ತರ ಸರಿಯಾಗಿಲ್ಲ, ಅದನ್ನು ನಾನು ಅವರಿಗೆ ಹೇಳಿದ್ದೇನೆ. ಈ ಅಭಿಪ್ರಾಯ ನನಗೆ ಗೊತ್ತಿದೆ, ಮಾನ್ಯ ಪ್ರತಾಪಚಂದ್ರಶೆಟ್ಟಿಯವರು ಪದವಿ ಪೂರ್ವ ಕಾಲೇಜಿನ ಕಟ್ಟಡದ ಅವಶ್ಯಕತೆ ಇದೆ, ಅದಕ್ಕೆ ಹಣವನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡಿ ಎಂದು, ಎಸ್ಟಿಮೇಟ್ ಆಗಿದೆ, ಇದರ ಬಗ್ಗೆ ನಾನು ಸಂಬಂಧಪಟ್ಟವರ ಜೊತೆ ಮಾತನಾಡಿರುತ್ತೇನೆ. ಈ ವರ್ಷ ಎಷ್ಟು ಹಣ ಒದಗಿಸುವುದಕ್ಕೆ ಸಾಧ್ಯವಿದೆ ಎನ್ನುವ ಬಗ್ಗೆ ಇಲಾಖೆಯ ಅಧಿಕಾರಿಗಳ ಜೊತೆ ಮಾತನಾಡಿ ಸ್ವಲ್ಪ ಹಣವನ್ನು ಒದಗಿಸುವುದಕ್ಕೆ ಸಹಾಯ ಮಾಡುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ: ಇಲ್ಲಿರತಕ್ಕಂಥ ಮೂಲ ಪ್ರಶ್ನೆ ಇಷ್ಟೆ. ವಿಧಾನಸಭೆಯಲ್ಲಿ ಕೊಡತಕ್ಕಂಥ ಉತ್ತರಗಳು ಏನು ಇವೆ ಅವು ಜವಾಬ್ದಾರಿಯಿಂದ ಕೊಡತಕ್ಕಂಥ ಉತ್ತರಗಳಾಗಿರಬೇಕು. ಸಂಬಂಧಪಟ್ಟ ಉತ್ತರವನ್ನು ಕೊಡಬೇಕಾದ ಅಧಿಕಾರಿಗೆ ಜವಾಬ್ದಾರಿ ಇರಬೇಕಾಗುತ್ತದೆ. ಇದು ಜವಾಬ್ದಾರಿ ರಹಿತ ಉತ್ತರವಾಗಿರುತ್ತದೆ. ಅಕೌಂಟಿಬಿಲಿಟಿ ಯಾರಿಗೂ ಇಲ್ಲದೆ ಇರತಕ್ಕಂಥ ಹಿನ್ನಲೆಯಲ್ಲಿ ಇವರು ಬೇಕಾಬಿಟ್ಟಿಯಾಗಿ ಉತ್ತರವನ್ನು ಕೊಡುತ್ತಾರೆ. ಬಹುಶಃ ಮಾನ್ಯ ಸಚಿವರಿಗೆ ಈ ವಿಚಾರ ಗೊತ್ತಿರುವುದರಿಂದ ಅವರು ಅದನ್ನು ಸಮರ್ಥನೆ ಮಾಡುವುದಕ್ಕೆ ಹೋಗಿಲ್ಲ. ಕೆಲವು ಸಚಿವರಿಗೆ ಇಂತಹ ವಿಚಾರಗಳು ಗಮನಕ್ಕೆ ಬರುವುದಿಲ್ಲ, ಆಗ ಅವರು ಅಧಿಕಾರಿಗಳು ಕೊಟ್ಟಿರತಕ್ಕಂಥ ಉತ್ತರಗಳನ್ನು ಸಮರ್ಥನೆ ಮಾಡುವುದಕ್ಕೆ ಹೋಗುತ್ತಾರೆ. ನಾನು ಕೇಳುವುದು ಇಷ್ಟೆ, ಇಂತಹ ಉತ್ತರಗಳನ್ನು ಕೊಟ್ಟಂತಹ ಅಧಿಕಾರಿಯ ಮೇಲೆ ತಾವು ಏನು ಕ್ರಮ ಕೈಗೊಳ್ಳುತ್ತೀರಿ. ಏಕೆಂದರೆ, ಇಲ್ಲಿ ಪ್ರಶ್ನೆ ಉದ್ಭವಿಸುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಮಾನ್ಯ ಸಚಿವರು ಅದನ್ನು ಒಪ್ಪಿಕೊಂಡಿದ್ದಾರೆ, ಸಚಿವರಿಗೆ ಎಸ್ಟಿಮೇಟ್ ಆಗಿದೆ ಎನ್ನುವ ವಿಚಾರ ಗೊತ್ತಿದ್ದರೂ ಕೂಡ ಈ ರೀತಿ ತಪ್ಪು ಉತ್ತರವನ್ನು ಕೊಟ್ಟಂತಹ ಅಧಿಕಾರಿಯ ಮೇಲೆ ತಾವು ಏನು ಕ್ರಮ ಕೈಗೊಳ್ಳುತ್ತೀರೆಂದು ನಾನು ಕೇಳುತ್ತೇನೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಉಪಾಧ್ಯಕ್ಷರೆ, ಬೆಳಿಗ್ಗೆ ನಾನು ಅಧಿಕಾರಿಗಳನ್ನು ಕರೆಸಿ ಈ ವಿಷಯಗಳನ್ನು ಚರ್ಚೆ ಮಾಡಿ ಇಲ್ಲಿ ಕೊಟ್ಟಿರತಕ್ಕಂಥದ್ದು ಸರಿಯಾಗಿಲ್ಲವೆಂದು ನಾನು ಅಧಿಕಾರಿಗಳಿಗೆ ಎಚ್ಚರಿಕೆಯನ್ನು ಕೊಟ್ಟಿರುತ್ತೇನೆ. ಈ ರೀತಿ ಉತ್ತರಗಳನ್ನು ಕೊಡತಕ್ಕಂಥದ್ದು ಸರಿಯಾದುದು ಅಲ್ಲ, ಏನು ನಡೆದಿದೆ ಅದರ ಹಿನ್ನಲೆ ಏನು? ಉತ್ತರವನ್ನು ಕೊಡುತ್ತಿದ್ದೇವೆ ಎನ್ನುವುದನ್ನು ವಿಮರ್ಶೆ ಮಾಡಿ ಉತ್ತರ ಕೊಡಬೇಕಾದ ಧರ್ಮ ಅವರದ್ದು ಇತ್ತು. ಉತ್ತರ ತಪ್ಪಾಗಿದೆ ಎಂದು ನಾನು ಒಪ್ಪಿಕೊಂಡಿದ್ದೇನೆ. ಈ ರೀತಿ ಆಗದ ಹಾಗೆ ನೋಡಿಕೊಳ್ಳಲು ಅಧಿಕಾರಿಗಳಿಗೆ ನಾನು ಎಚ್ಚರಿಕೆಯನ್ನು ಕೊಟ್ಟಿದ್ದೇನೆ. ಯಾವ ಅಧಿಕಾರಿಯು ಜವಾಬ್ದಾರಿರಹಿತವಾಗಿ ಉತ್ತರವನ್ನು ಕೊಡಬಾರದು, ಜವಾಬ್ದಾರಿಯುತವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ವ್ಯತ್ಯಾಸವನ್ನು ನಾನು ಸರಿಪಡಿಸುತ್ತೇನೆ. ಎಸ್ಟಿಮೇಟ್ ಏನಾಗಿದೆ ನೋಡಿಕೊಂಡು ಈ ವರ್ಷ ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ಮಾನ್ಯ ಉಪಾಧ್ಯಕ್ಷರೆ, ಸರ್ಕಾರದವರು ಈ ವರ್ಷ ಬೇಕಾದಷ್ಟು ಅನುದಾನವನ್ನು ಕಾದಿರಿಸುತ್ತೇವೆ ಎಂದು ಹೇಳಿದರೆ ಸಾಕು, ಏಕೆಂದರೆ ನಾನು ಸತತವಾಗಿ ನಾಲ್ಕನೇ ಬಾರಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಮಾನ್ಯ ಗೋವಿಂದೇಗೌಡರೆ, ನಾನು ಉನ್ನತ ಶಿಕ್ಷಣ ಸಚಿವರಿಗೆ, ನಿಮ್ಮ ಹೆಸರನ್ನು ಕೋಟ್ ಮಾಡಿಕೊಂಡು ಅವರು ಬೇಕಾದಷ್ಟು ಶಾಲಾ ಕೊಠಡಿಗಳನ್ನು ಕೊಟ್ಟಿದ್ದಾರೆ ಎಂದು ಹೇಳಿದ್ದೆ. ಇವತ್ತು ತಾವು ಶಾಲಾ ಕೊಠಡಿಗಳನ್ನು ಕೊಡುತ್ತೀರಿ, ಆದರೆ ಪದವಿ ಪೂರ್ವ

ಕಾಲೇಜುಗಳಿಗೆ ಬೇಕಾದಷ್ಟು ಕೊಠಡಿಗಳನ್ನು ಕೊಟ್ಟಿಲ್ಲ. ಆದ್ದರಿಂದ ಈ ವರ್ಷವಾದರೂ ಇದಕ್ಕೆ ಬೇಕಾದಷ್ಟು ಅನುದಾನವನ್ನು ಕೊಡುತ್ತೇವೆಂದು ಹೇಳಿದರೆ ನಮ್ಮ ಪ್ರಶ್ನೆ ಉದ್ಭವವಾಗುವುದಿಲ್ಲ.

ಶ್ರೀ ಹೆಚ್.ಜಿ.ಗೋವಿಂದೇಗೌಡ: ಮಾನ್ಯ ಉಪಾಧ್ಯಕ್ಷರೆ, ನಮ್ಮ ಸರ್ಕಾರವು ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಒತ್ತನ್ನು ಕೊಡುತ್ತಿದ್ದೇವೆ. ಪ್ರಾಥಮಿಕ ಶಾಲೆಗಳಿಗೆ ಎಷ್ಟು ಕೊಠಡಿಗಳ ಅವಶ್ಯಕತೆ ಇದೆ, ಆ ಕೊಠಡಿಗಳನ್ನು ಕಟ್ಟಿಸುವಲ್ಲಿ ನಾವು ಮುಂದೆ ಇದ್ದೇವೆ. ಅದೇ ರೀತಿ ಲಂಚರುಷವತ್ತುಗಳು ಇಲ್ಲದ ಹಾಗೆ ಉಪಾಧ್ಯಾಯರುಗಳನ್ನು ನೇಮಕಾತಿ ಮಾಡುವ ನಿಟ್ಟಿನಲ್ಲಿ ನಾವು ಪ್ರಥಮ ಸ್ಥಾನದಲ್ಲಿದ್ದೇವೆ. ಇದಾದನಂತರ ನಾವು ಪದವಿಪೂರ್ವ ಕಾಲೇಜುಗಳಿಗೆ ಕೊಠಡಿಗಳನ್ನು ಒದಗಿಸುವಂಥದ್ದು ಇದೆ. ನಾವು ಮೊದಲ ಆದ್ಯತೆಯನ್ನು ಶಿಕ್ಷಣ ಇಲಾಖೆಯಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಕೊಡುತ್ತಿದ್ದೇವೆ. ಇದನ್ನು ತಾವು ಒಪ್ಪಿಕೊಂಡಿದ್ದೀರಿ, ಪ್ರಾಥಮಿಕ ಪಾಠಶಾಲಾ ಕಟ್ಟಡಗಳ ಬಗ್ಗೆ ಅವಶ್ಯಕತೆ ಇಲ್ಲವೆಂದು ಬೇಕಾದಷ್ಟು ಕೊಟ್ಟಿದ್ದೀರೆಂದು, ಒಪ್ಪಿಕೊಂಡಿದ್ದೀರಿ ಬಹಳ ಸಂತೋಷವಾಯಿತು. ಆದರೆ ಪದವಿಪೂರ್ವಕಾಲೇಜುಗಳಿಗೆ ನಾವು ಹಣದ ಇತಿಮಿತಿಗಳನ್ನು ನೋಡಿ ಮಾಡಬೇಕಾಗುತ್ತದೆ. ನಿಮ್ಮ ಸಮಸ್ಯೆಯು ನನಗೆ ಅರ್ಥವಾಗಿದೆ, ನಾವು ಎಷ್ಟನ್ನು ಒದಗಿಸುವುದಕ್ಕೆ ಸಾಧ್ಯವೋ ಅಷ್ಟನ್ನು ಒದಗಿಸಿಕೊಡುವುದಕ್ಕೆ ಪ್ರಯತ್ನಪಡುತ್ತೇನೆ.

ಶ್ರೀ ಕೆ.ಪ್ರತಾಪ್‌ಚಂದ್ರಶೆಟ್ಟಿ: ಮನಗೆ ನೇರವಾದ ಉತ್ತರ ಬೇಕಾಗಿದೆ. ನಾನು ಹೇಳಿರುವಂತಹ ವಿಚಾರವನ್ನು ತಾವು ಅರ್ಥಮಾಡಿಕೊಳ್ಳುತ್ತೀರೆಂದು ಭಾವಿಸುತ್ತೇನೆ. ಇದು ನನ್ನ ಮನೆಯ ಕೆಲಸವಲ್ಲ, ಒಂದು ಪದವಿಪೂರ್ವ ಕಾಲೇಜಿಗೆ 8 ವರ್ಷಗಳಿಂದ ಇಲ್ಲಿಯವರೆವಿಗೆ ಕೊಠಡಿಗಳು ಇಲ್ಲ. ಇದರ ಜವಾಬ್ದಾರಿಯನ್ನು ಹೊರತಕ್ಕಂಥವರು ಯಾರು? ಶಾಸಕರು ಹೊರಬೇಕಾ, ಸಚಿವರು ಹೊರಬೇಕಾ, ಸಂಬಂಧಪಟ್ಟ ಇಲಾಖೆಯವರು ಜವಾಬ್ದಾರಿಯನ್ನು ಹೊರಬೇಕಾ ಎನ್ನುವಂತಹ ವಿಚಾರದ ಬಗ್ಗೆ ಚರ್ಚೆಯಾಗಬೇಕಾಗಿದೆ. ನಾವು ಸಾಮಾನ್ಯವಾಗಿ ಕೇಳಿರುವಂತದ್ದು ಏನೆಂದರೆ ರಾಜಕೀಯ ತೀರ್ಮಾನವಲ್ಲ, ಒಂದು ಪದವಿಪೂರ್ವ ಕಾಲೇಜಿಗೆ ಬೇಕಾಗಿರುವಂತಹ ಕೊಠಡಿಗಳ ನಿರ್ಮಾಣ ಇಲ್ಲಿಯತನಕ ಆಗಿಲ್ಲ. ಆ ಜವಾಬ್ದಾರಿಯನ್ನು ಹೊರತಕ್ಕಂಥವರು ಯಾರು? ಸಚಿವರೆ, ಶಾಸಕರೆ, ಅಥವಾ ಇಲಾಖೆಯವರೆ ಯಾರು ಎಂಬ ಬಗ್ಗೆ ನಮಗೆ ಉತ್ತರವನ್ನು ಕೊಡಬೇಕಾಗುತ್ತದೆ. ಸರ್ಕಾರದಲ್ಲಿ ಹಣವಿಲ್ಲ, ಅದನ್ನು ಹೊಂದಿಸಿಕೊಂಡು ಮಾಡಲಾಗುವುದು ಎನ್ನುವಂತಹ ಉತ್ತರವನ್ನು ಪದೇಪದೇ ಕೇಳಿ ನಮಗೆ ಸಾಕಾಗಿದೆ. ಈ ಜವಾಬ್ದಾರಿಯನ್ನು ಹೊರತಕ್ಕಂಥವರು ಇಲಾಖೆಯೇ, ಇಲಾಖೆಯು ಏಕೆ ಮಾಡಿಲ್ಲ, ಇದನ್ನು ನಾವು ಕೇಳಬೇಕಾಗಿಲ್ಲ, ಇದು ಅವರ ಜವಾಬ್ದಾರಿಯಾಗಿರುತ್ತದೆ. ಈ ವರ್ಷ ಬೇಕಾದಷ್ಟು ಹಣವನ್ನು ಕೊಡುತ್ತೇವೆಂದು ಹೇಳಿದರೆ ನಮಗೆ ಸಾಕು. ಅದಕ್ಕೂ ತಾವು ಮೀನಾಮೇಷ

ಎಣಿಸಿದರೆ ನಾವು ಏತಕ್ಕಾಗಿ ಪ್ರಶ್ನೆಯನ್ನು ಕೇಳಬೇಕು. ಆ ಜವಾಬ್ದಾರಿ ಏತಕ್ಕೆ ಬೇಕು, ಆ ಜವಾಬ್ದಾರಿಯನ್ನು ಹೊರತಕ್ಕಂಥವರು ಯಾರು? ಇಲಾಖೆಗೆ ಏನು ಕೆಲಸವಿದೆ. ಎಲ್ಲಿ ಶಾಲೆ ಹಾಗೂ ಕಾಲೇಜುಗಳು ಇವೆ, ಆ ಶಾಲಾಕಾಲೇಜುಗಳಿಗೆ ಮೂಲಭೂತವಾದಂತಹ ಸೌಲಭ್ಯಗಳನ್ನು ಒದಗಿಸುವುದಕ್ಕೆ ಆಗದಿದ್ದರೆ, ಆ ಇಲಾಖೆಯ ಔಚಿತ್ಯವನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ. ಇದರಲ್ಲಿ ರಾಜಕೀಯವಿಲ್ಲ, ಆ ಪಕ್ಷ ಈ ಪಕ್ಷ ಎಂಬ ಭೇದಭಾವವಿಲ್ಲ, ಅಲ್ಲಿರುವಂತಹ ವಿದ್ಯಾರ್ಥಿಗಳಿಗೆ ಅನುಕೂಲಕರವಾದ ವಾತಾವರಣ ನಿರ್ಮಾಣ ಮಾಡಬೇಕಾದಂತದ್ದು ಅವರ ಜವಾಬ್ದಾರಿಯಾಗಿರುತ್ತದೆ. ಈ ವಿಷಯದ ಬಗ್ಗೆ ಹಣವಿಲ್ಲವೆಂದು ಕೈಚೆಲ್ಲಿಬಿಟ್ಟರೆ ಹೇಗೆ?

ಶ್ರೀ ಹೆಚ್.ಜಿ.ಗೋವಿಂದೇಗೌಡ: ನಾವು ಈ ವರ್ಷ ಹಣದ ಇತಿಮಿತಿಯನ್ನು ನೋಡಿಕೊಳ್ಳಬೇಕಾಗುತ್ತದೆ. ಒಂದೇ ಬಾರಿ ನಾವು ಪ್ರೈಮರಿ ಶಾಲಾ ಕಟ್ಟಡಗಳನ್ನು ಹಾಗೂ ಪದವಿಪೂರ್ವ ಕಾಲೇಜಿನ ಕಟ್ಟಡಗಳನ್ನು ಕಟ್ಟಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಹಣದ ಪರಿಸ್ಥಿತಿಯನ್ನು ನೋಡಿಕೊಂಡು ಹಣವನ್ನು ಒದಗಿಸಿಕೊಡಬೇಕಾಗುತ್ತದೆ. ಈ ವರ್ಷ ಬಜೆಟ್‌ನಲ್ಲಿ ಇದಕ್ಕೆ ಎಷ್ಟು ಹಣವನ್ನು ಇಟ್ಟಿದ್ದಾರೆ, ಎಷ್ಟೆಷ್ಟು ಸ್ಪಿಲ್‌ಓವರ್ ವರ್ಕ್ಸ್. ಈ ರಾಜ್ಯದಲ್ಲಿ ಉಳಿದಿದೆ, ಅರ್ಧವಾಗಿದೆ, ಮುಕ್ಕಾಲು ಆಗಿದೆ ಇವುಗಳನ್ನು ಕಂಪ್ಲೀಟ್ ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಿದೆ. ನಾವು ಅಧಿಕಾರಿಗಳ ಮೇಲೆ ಜವಾಬ್ದಾರಿಯನ್ನು ಕೊಡುವುದಕ್ಕಾಗುವುದಿಲ್ಲ. ಸರ್ಕಾರದಿಂದ ನಾವು ಎಷ್ಟು ಹಣವನ್ನು ಅಧಿಕಾರಿಗಳಿಗೆ ಕೊಡುತ್ತೇವೆಯೋ ಅಧಿಕಾರಿಗಳು ಅದಕ್ಕೆ ಸರಿಯಾಗಿ ಎಸ್ಟಿಮೇಟ್ ಮಾಡಿ, ಪ್ಲಾನ್ ಮಾಡಿ ಕೆಲಸವನ್ನು ಮಾಡುತ್ತಾರೆ. ನಮ್ಮಲ್ಲಿರತಕ್ಕಂತಹ ಹಣದಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಣವನ್ನು ಒದಗಿಸುವುದಕ್ಕೆ ನಾನು ಪ್ರಯತ್ನಪಡುತ್ತೇನೆ.

ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಸ್ಟೈಫಂಡ್

297 (2050)

ಶ್ರೀ ಎ.ರಾಮದಾಸ್ (ಕೃಷ್ಣರಾಜ): ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಖಾಸಗೀ ದಂತ ವೈದ್ಯಕೀಯ ಕಾಲೇಜುಗಳಲ್ಲಿ ಸ್ನಾತಕೋತ್ತರ ಮೆರಿಟ್ ವಿದ್ಯಾರ್ಥಿಗಳಿಗೆ ಸ್ಟೈಫಂಡ್ ನೀಡಲಾಗುತ್ತಿದೆಯೇ?

ಆ) ಹಾಗಿಲ್ಲದಿದ್ದರೆ ಅದಕ್ಕೆ ಕಾರಣಗಳೇನು?